**ಕರ್ನಾಟಕ ವಿಧಾನ ಪರಿಷತ್ತು**

**148ನೇ ಅಧಿವೇಶನ 2022**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. | : | 313 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಲೋಕೋಪಯೋಗಿ ಇಲಾಖೆಯಿಂದ ಬಳ್ಳಾರಿ ಜಿಲ್ಲೆ ರಾಜ್ಯ ಹೆದ್ದಾರಿ-289 ರಲ್ಲಿ ತುಂಗಭದ್ರಾ ಬಲದಂಡೆ ಕಂಪ್ಲಿ ಸೇತುವೆಗೆ ಕಾಮಗಾರಿಯನ್ನು ನಡೆಸಲು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ ಈ ಸೇತುವೆ ನಿರ್ಮಾಣಕ್ಕೆ ಎಷ್ಟು ಹಣವನ್ನು ಮೀಸಲಿರಿಸಲಾಗಿದೆ ಹಾಗೂ ಯಾವ ಸ್ಥಳದಲ್ಲಿ ಈ ಸೇತುವೆ ನಿರ್ಮಾಣವನ್ನು ಮಾಡಲಾಗುವುದು; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಲೋಇ:ಇ-104 ಇಎಪಿ 2022 ಬೆಂಗಳೂರು ದಿನಾಂಕ: 20-06-2022 ರಲ್ಲಿ 56 ಸೇತುವೆಗಳಿಗೆ ಕೆ.ಆರ್.ಡಿ.ಸಿ.ಎಲ್ ವತಿಯಿಂದ ಕಾರ್ಯಸಾಧ್ಯತಾ ವರದಿ ತಯಾರಿಸಲು ಅನುಮೋದನೆ ನೀಡಲಾಗಿರುತ್ತದೆ. ಈ ಪಟ್ಟಿಯಲ್ಲಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ರಾಜ್ಯ ಹೆದ್ದಾರಿ-29 ರ ಸರಪಳಿ 80.400 ಕಿ.ಮೀ ರಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಕಂಪ್ಲಿ ಮತ್ತು ಗಂಗಾವತಿ ನಡುವೆ ಬೃಹತ್ ಸೇತುವೆ ನಿರ್ಮಾಣವು ಅಂದಾಜು ಮೊತ್ತ ರೂ. 77.76 ಕೋಟಿಗಳಲ್ಲಿ ಕೈಗೊಳ್ಳಲು ಸೇರಿರುತ್ತದೆ. ಸದರಿ ಸೇತುವೆಯನ್ನು ಹಾಲಿ ಇರುವ ಸೇತುವೆಗೆ ಸಮಾನಾಂತರವಾಗಿ ಗರಿಷ್ಠ ನೀರಿನ ಹರಿವಿನ ಮಟ್ಟವನ್ನು ಅನುಸರಿಸಿ ನಿರ್ಮಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಆ) | ತುಂಗಭದ್ರಾ ಬಲದಂಡೆ ಪ್ರದೇಶದ ಗಂಗಾವತಿ-ದರೋಜಿ ಮದ್ಯೆ ನೂತನ ಬ್ರಾಡ್‌ಗೇಜ್ ರೈಲ್ವೇ ನಿರ್ಮಾಣಕ್ಕಾಗಿ ಸರ್ವೆ ಕಾರ್ಯವನ್ನು ನಡೆಸಿರುವುದು ಹಾಗೂ ಈ ಬ್ರಾಡ್‌ಗೇಜ್‌ನ ಮಾರ್ಗ ಸುಮಾರು 30 ಕಿ.ಮೀ ಅಂತರವಿದ್ದು ಇದರಲ್ಲಿ ಗಂಗಾವತಿ ಮತ್ತು ಕಂಪ್ಲಿ ಮದ್ಯೆ ಬರುವಂತಹ ತುಂಗಭದ್ರಾ ನದಿಗೆ ರೈಲ್ವೇ ಸೇತುವೆಯನ್ನು ಸಹ ನಿರ್ಮಾಣ ಮಾಡಬೇಕಿದ್ದು ಈ ರೈಲ್ವೇ ಯೋಜನೆಗೆ ರಾಜ್ಯ ಸರ್ಕಾರವು ಸಹ 50% ರಷ್ಟು ಹಣವನ್ನು ಭರಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಕುರಿತಂತೆ ರೈಲ್ವೇ ಇಲಾಖೆಯಿಂದ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ರವರು ತಿಳಿಸಿರುತ್ತಾರೆ. |
| ಇ) | ಬಳ್ಳಾರಿ ಜಿಲ್ಲೆ ರಾಜ್ಯ ಹೆದ್ದಾರಿ-289 ರಲ್ಲಿ ನಿರ್ಮಿಸಲು ಮುಂದಾಗಿರುವ ಕಂಪ್ಲಿ ರಸ್ತೆ ಸೇತುವೆ ಹಾಗೂ ಗಂಗಾವತಿ-ದರೋಜಿ ಮದ್ಯೆ ಬರುವ ರೈಲ್ವೇ ಸೇತುವೆಗಳು ಹತ್ತಿರವೇ ಇದ್ದು ಸರ್ಕಾರ ಈ ರಸ್ತೆ ಸೇತುವೆ ನಿರ್ಮಾಣವನ್ನು ತಕ್ಷಣಕ್ಕೆ ನಿಲ್ಲಿಸಿ ತುರ್ತಾಗಿ ಕೇಂದ್ರದ ರೈಲ್ವೇ ಇಲಾಖೆಯೊಂದಿಗೆ ಸಮಾಲೋಚಿಸಿ ಆಂಧ್ರ ಪ್ರದೇಶದ ರಾಜಮಂಡ್ರಿ ಹತ್ತಿರ ಗೋದಾವರಿ ನದಿಗೆ ನಿರ್ಮಾಣ ಮಾಡಿರುವ ಬಹುಮಹಡಿ ಸೇತುವೆ Road Cum-rail bridge ರೀತಿಯಲ್ಲಿ ನಿರ್ಮಾಣ ಮಾಡಿದರೆ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ವೆಚ್ಚವಾಗುವುದು ಉಳಿಕೆಯಾಗುವುದಿಲ್ಲವೇ ಈ ದಿನ ನಿರ್ಮಾಣ ಕಾರ್ಯ ಮಾಡಲು ಸರ್ಕಾರ ಚಿಂತನೆಗಳೇನು? (ಮಾಹಿತಿ ನೀಡುವುದು) | |

ಸಂಖ್ಯೆ. ಲೋಇ E- 365 ಇಎಪಿ 2022

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು